# ಮುಂಡಗೋಡಿಗೆ ಬಂದ ದಲೈಲಾಮಾ


■ ರಾಹುಲ ಬೆಳಗಲಿ

'ಮನುಷ್ಯ ಎಂದ ಮೇಲೆ ಸಿಟ್ಟು ಮತ್ತು ಕಿರಿಕಿರಿ ಇದ್ದಿದ್ದೇ. ಅವು ನಿಮ್ಮ ಬದುಕಿನ ದೈನಂದಿನ ಭಾಗ. ನೀವು ಅವು ಎರಡರ ಮೇಲೆಯೂ ಬೇಸರಪಡಬಾರದು. ಜೊತೆಗೆ ಇಟ್ಟುಕೊಳ್ಳಲೂಬಾರದು. ಮನಸ್ಸಿನೊಳಗೆ ಉಳಿಯಲು ಅವಕಾಶವೂ ನೀಡಬಾರದು. ಅವು ಒಮ್ಮೆ ನಿಮ್ಮೊಳಗೆ ನುಸುಳಿ ಕೂತರೆ ಮುಗೀತು. ಮನಸ್ಸು ಸಂಶಯದ ಗೂಡು ಆಗುತ್ತೆ, ಅನಿಶ್ಚಿತತೆ ಕಾಡುತ್ತೆ, ಬರೀ ನಕಾರಾತ್ಮಕ ವಿಚಾರಗಳ ಹೊಯ್ದಾಟ ಇರುತ್ತೆ. ಇವೆಲ್ಲದರ ಜೊತೆಗೆ ಚಿಂತೆಯು ಆವರಿಸುತ್ತದೆ'.

'ಸ್ವಯಂ ಕೋಪ ಮಾಡಿಕೊಳ್ಳುವುದಿರಲಿ, ಇನ್ನೊಬ್ಬರಿಗೂ ಕೋಪ ತರಿಸುವಂತೆ ವರ್ತಿಸಬಾರದು. ಅಂತಹ ಆಲೋಚನೆಯೂ ಮಾಡಬಾರದು' ಎಂಬ ಕಾಳಜಿ ಮತ್ತು ಆಶಯ ಟಿಬೆಟ್‌ನ ಧರ್ಮ ಗುರು 14ನೇ ದಲೈ ಲಾಮಾ ಅವರದ್ದು. ಮನಸ್ಸಿನ ಭಾವನೆಗಳು ಚಂಚಲ ಮತ್ತು ಅಷ್ಟೇ ನಾಜೂಕು ಸ್ಥಿತಿಯಲ್ಲಿ ಇರುತ್ತವೆ ಎಂಬ ನಂಬಿಕೆ ಅವರದ್ದು. ಅದಕ್ಕೆ ಅವರು ಯಾವಾಗಲೂ ನಗುಮೊಗದಲ್ಲೇ ಕಾಣಸಿಗುತ್ತಾರೆ. ಇತರರಿಗೂ 'ಯಾವಾಗಲೂ ನಗುತ್ತಿರಿ. ನೆಮ್ಮದಿಯ ಬದುಕು ಕಂಡುಕೊಳ್ಳುವಿಕೆಯತ್ತ ನಿಮ್ಮ ಗುರಿಯಿರಲಿ' ಎನ್ನುತ್ತಾರೆ.

ಟಿಬೆಟಿಯನ್ನರು ಸೇರಿ ಬಹುತೇಕರು ಅವರನ್ನು ದಲೈ ಲಾಮಾ ಎಂದೇ ಕರೆಯುತ್ತಾರೆ. ಟಿಬೆಟಿಯನ್ ಭಾಷೆಯಲ್ಲಿ ದಲೈ ಲಾಮಾ ಎಂದರೆ 'ಬುದ್ಧಿವಂತಿಕೆಯ ಸಾಗರ'. ದಲೈ ಎಂದರೆ ಮಹಾನ್ ಸಾಗರ, ಲಾಮಾ ಎಂದರೆ ಗುರು. ಟಿಬೆಟಿಯನ್ ಬೌದ್ಧಧರ್ಮೀಯರು ತಮ್ಮ ಗುರುಗಳಿಗೆ ದಲೈ ಲಾಮಾ ಎಂದು ಕರೆಯುತ್ತಾರೆ. ಈಗಿನ 14ನೇ ದಲೈ ಲಾಮಾ ಅವರ ನಿಜ ಹೆಸರು ಟೆನ್ಜಿನ್ ಗ್ಯಾಟ್ಸೊ. ಅಸಲಿಗೆ ಅವರ ಹೆಸರು ಒಂದು ವಾಕ್ಯದಷ್ಟು ಉದ್ದವಿದೆ. ಅದನ್ನು ಸಂಕ್ಷಿಪ್ತ ಮಾಡಿಕೊಂಡಿದ್ದಾರೆ.

ಈ ಗುರುಗಳು ಇತರೆ ಧರ್ಮಗುರುಗಳಿಗಿಂತ ಕೊಂಚ ಭಿನ್ನ. ಸದಾ ಗಂಭೀರವಾಗಿ ಇರಲು ಇಷ್ಟಪಡದ ಅವರು, 'ಬದುಕು ಸುಂದರವಾಗಿದೆ. ಅನಗತ್ಯ ಒತ್ತಡ ಮಾಡಿಕೊಂಡಷ್ಟು ಜೀವನ ಭಾರವಾಗುತ್ತದೆ. ಸಣ್ಣಪುಟ್ಟ ವಿಷಯಗಳಲ್ಲೇ ಖುಷಿ ಕಂಡುಕೊಳ್ಳಲು ಪ್ರಯತ್ನಿಸಿ. ದ್ವೇಷ, ಕೋಪ, ಅಸೂಯೆ ಮಾಡಿಕೊಂಡಷ್ಟು ಸಮಸ್ಯೆ ಹೆಚ್ಚಾಗುತ್ತದೆ' ಎಂದು ತಿಳಿ ಹೇಳುತ್ತಾರೆ. 'ಪ್ರೀತಿ, ಶಾಂತಿ, ದಯೆ, ಸಹಾನುಭೂತಿ ಮತ್ತು ಅಹಿಂಸಾ ತತ್ವ ಪಾಲಿಸಿದಷ್ಟು ಜಗತ್ತು ಅಮೋಘ'ವಾಗುತ್ತದೆ. ಇದು ಬಹಳ ಸರಳ ಮತ್ತು ಸಹಜವಾದ ಸಂಗತಿ. ಪಾಲಿಸಬೇಕು ಅಷ್ಟೇ' ಎಂದು ಅವರು ಹೇಳುತ್ತಾರೆ.



ಟಿಬೆಟ್ ಪ್ರದೇಶದ ಆಮ್ದೋ ಪ್ರಾಂತ್ಯದಲ್ಲಿರುವ ಟಕ್ಸರ್ ಎಂಬ ಪುಟ್ಟ ಗ್ರಾಮದಲ್ಲಿನ ಕುಟುಂಬವೊಂದರಲ್ಲಿ 1935ರ ಜುಲೈ 6ರಂದು ಜನಿಸಿದಾಗ, ಅವರಿಗೆ ಲಾಮೋ ಥೊಂಡಪ್ ಎಂದು ಹೆಸರಿಡಲಾಯಿತು. ದಿನಗಳು ಕಳೆದಂತೆ ಟಿಬೆಟಿಯನ್ ಸಂಪ್ರದಾಯದಂತೆ ಧರ್ಮಗುರುಗಳ ಹುಡುಕಾಟ ನಡೆದಾಗ, ಆ ಸ್ಥಾನಕ್ಕೆ ಇವರನ್ನು ಆಯ್ಕೆ ಮಾಡಲಾಯಿತು. ಕಿರಿಯ ವಯಸ್ಸಿನಲ್ಲೇ ಆ ಗುರುತರ ಜವಾಬ್ದಾರಿಯನ್ನು ವಹಿಸಿಕೊಂಡ ಅವರು, ಟಿಬೆಟಿಯನ್ ಬೌದ್ಧಧರ್ಮ ಮತ್ತು ಸಂಸ್ಕೃತಿಯನ್ನು ಪರಿಪಾಲಿಸುತ್ತಿದ್ದಾರೆ. ಅದರ ಅಪ್ಪಟ ಮತ್ತು ಅಪರೂಪದ ರಾಯಭಾರಿಯೂ ಅವರು ಆಗಿದ್ದಾರೆ. ವಿಶ್ವದಾದ್ಯಂತ ಗೌತಮ ಬುದ್ಧನ ಸಂದೇಶವನ್ನು ತಲುಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಭಾರತದ ಜೊತೆ ದಲೈಲಾಮಾ, ಅವರ ಅನುಯಾಯಿಗಳು ಮತ್ತು ಟಿಬೆಟಿಯನ್ನರದ್ದು ನಿಕಟ ಸಂಬಂಧವಿದೆ. 1950ರಲ್ಲಿ ಟಿಬೆಟ್ ಪ್ರದೇಶದ ಮೇಲೆ ಚೀನಾದವರು ದಾಳಿ ನಡೆಸಿ, ತಮ್ಮ ದೇಶವೆಂದು ಘೋಷಿಸಿದಾಗ ಟಿಬೆಟಿಯನ್ನರಿಂದ ಪ್ರತಿರೋಧ ವ್ಯಕ್ತವಾಯಿತು. ಬೇರೆ ಬೇರೆ ಸ್ವರೂಪದಲ್ಲಿ ಚೀನೀಯರು ಹಿಂಸೆ ಮುಂದುವರೆಸಿದಾಗ, ಟಿಬೆಟಿಯನ್ನರು ಬೌದ್ಧಧರ್ಮ, ಸಂಸ್ಕೃತಿ ಮತ್ತು ಸ್ವಾಯತ್ತತೆ ಉಳಿವಿಗೆ ಪಣ ತೊಟ್ಟರು. ಈ ಸಂದರ್ಭದಲ್ಲೇ ದಲೈ ಲಾಮಾ ಅವರು ಭಾರತದ ನೆರವು ಕೋರಿದರು. ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಂದ ಆಶ್ರಯದ ಭರವಸೆ ಸಿಕ್ಕಿದ್ದರಿಂದ 1959ರಲ್ಲಿ ದಲೈ ಲಾಮಾ ಅವರು ತಮ್ಮ ಶಿಷ್ಯರು ಮತ್ತು ಕೆಲ ಟಿಬೆಟಿಯನ್ನರೊಂದಿಗೆ ಭಾರತ ಪ್ರವೇಶಿಸಿದರು.

ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಧಾರ್ಮಿಕ ಕೇಂದ್ರವನ್ನು ಮಾಡಿಕೊಂಡಿರುವ ದಲೈಲಾಮಾ ಅವರು ಅಲ್ಲಿಯೇ ಹೆಚ್ಚಿನ ಸಮಯ ವಾಸಿಸುತ್ತಾರೆ. ಈ ಸ್ಥಳವು ಬೌದ್ಧ ಧರ್ಮ ಆಚರಣೆ ಮತ್ತು ಪ್ರಾರ್ಥನೆಯ ಪ್ರಮುಖ ಕೇಂದ್ರವಾಗಿದೆ. 'ದ್ವೇಷ, ಹಿಂಸೆ, ಅಸೂಯೆಯನ್ನು ತೊರೆದು ಮಾನವೀಯತೆ ಮತ್ತು ಅಹಿಂಸಾ ತತ್ವದ ಪರಿಪಾಲನೆಯಲ್ಲಿ ನಂಬಿಕೆ ಇಡಿ' ಎಂಬ ಮುಖ್ಯ ಸಂದೇಶ ಇಲ್ಲಿ ಸಾರಲಾಗುತ್ತದೆ. ದೇಶದ ವಿವಿಧೆಡೆ ಟಿಬೆಟಿಯನ್ ಕ್ಯಾಂಪ್‌ಗಳಿದ್ದು, ಅಲ್ಲಲ್ಲಿ ಟಿಬೆಟಿಯನ್ನರು ಚೆಂದದ ಬದುಕು ಕಟ್ಟಿಕೊಂಡಿದ್ದಾರೆ. ಎಲ್ಲರೊಂದಿಗೆ ಬೆರೆಯುತ್ತಾರೆ. ಖುಷಿಯಾಗಿ ಇರುತ್ತಾರೆ.

90 ವರ್ಷದ ದಲೈ ಲಾಮಾ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತರೂ ಹೌದು. ಅವರು ಆರು ವರ್ಷದ ಬಳಿಕ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ಟಿಬೆಟ್ ಕ್ಯಾಂಪ್‌ಗೆ ಬಂದಿದ್ದಾರೆ. ಇಲ್ಲಿಯೇ ಎರಡು ತಿಂಗಳ ಕಾಲ ಅವರು ಇರುತ್ತಾರೆ. ಆದರೆ, ಸಾರ್ವಜನಿಕರ ಭೇಟಿಗೆ ಸಿಗುವುದು ತುಂಬಾ ಅಪರೂಪ. ಬಿಗಿ ಬಂದೋಬಸ್ತ್ ಇರುವ ಕಾರಣ ಅವರನ್ನು ಭೇಟಿಯಾಗಬೇಕಿದ್ದರೆ, ಕೆಲವಷ್ಟು ನಿಯಮಗಳನ್ನು ಪಾಲಿಸಬೇಕು. ಆ ಕ್ಯಾಂಪ್‌ನ ಪ್ರಮುಖರಿಂದ ಅನುಮತಿ ಪಡೆಯಬೇಕು. ಒಂದು ವೇಳೆ ಅನುಮತಿ ಸಿಕ್ಕರೂ ಕೆಲ ನಿಮಿಷಗಳವರೆಗೆ ಮಾತ್ರ ಅವರನ್ನು ಭೇಟಿ ಆಗಬಹುದು.

ಇನ್ನೊಂದು ವಿಷಯ, ದಲೈಲಾಮಾ ಅದಮ್ಯ ಜೀವನೋತ್ಸಾಹಿ. ಸಕಾರಾತ್ಮಕ ಚಿಂತನೆಯುಳ್ಳ ಆಶಾಜೀವಿ. ಮುಂಡಗೋಡಿಗೆ ಬಂದ ಸಂದರ್ಭದಲ್ಲಿ ಶಿಷ್ಯರೊಂದಿಗೆ ಮಾತಿಗಿಳಿದಾಗ, 'ನಾನು 130 ವರ್ಷ ಬದುಕುತ್ತೇನೆ. ನಿಮ್ಮೊಂದಿಗೆ ಇರುತ್ತೇನೆ' ಎಂಬ ವಿಶ್ವಾಸದ ಮಾತುಗಳನ್ನು ಅವರು ಹೇಳಿದ್ದಾರೆ. ಅವರ ಆಶಯ ಈಡೇರಲಿ ಎಂದು ಹಾರೈಸೋಣ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65